**ದಿನಾಂಕ :03.04.2021 ರಂದು ಪೂರ್ವಾಹ್ನ 10.00 ಘಂಟೆಗೆ ವಾರ್ಡ್ ಸಂಖ್ಯೆ-180 ರ ವಾರ್ಡ್ ಸಮಿತಿಯ ಸಭೆಯ ನಡವಳಿಗಳು :-**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.**

1) ಶ್ರೀ ಹೇಮಂತ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.
2) ಶ್ರೀ ಅವೀಶ ಹೆಚ್.ಎಂ, ವಾರ್ಡ್ ಸಮಿತಿ ಸಂಚಾಲಕರು ಮತ್ತು ಕಿರಿಯ ಅಭಿಯಂತರರು ಬನಶಂಕರಿ ದೇವಸ್ಥಾನ ವಾರ್ಡ್ ಸಂಖ್ಯೆ-180.
3) ಶ್ರೀ ರುದ್ರೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ ವಿಭಾಗ.
4) ಶ್ರೀ ರಾಜಶೇಖರ್, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ ವಿಭಾಗ.
5) ಶ್ರೀ ಸೈಯದ್ ಮಯೀರುಖ್ ಅಹಮದ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
6) ರಾಜೇಶ್ವರಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
7) ಶ್ರೀ ಜಯಹರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ
8) ಕಾವ್ಯ, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ
9) ಶ್ರೀ ಹರೀಶ್, ಉಪ ವಲಯ ಅರಣ್ಯಾಧಿಕಾರಿಗಳು, ಬಿ.ಬಿ.ಎಂ.ಪಿ
10) ಶ್ರೀ ಚನ್ನಪ್ಪ, ಎ.ಎಸ್.ಐ ಬನಶಂಕರಿ ಟ್ರಾಫಿಕ್ ಪೋಲೀಸ್ ಠಾಣೆ.
11) ಶ್ರೀ ಅಪ್ಪಾಜಿ ಎ.ಎಸ್.ಐ ಕುಮಾರಸ್ವಾಮಿ ಲೇಔಟ್ ಟ್ರಾಫಿಕ್ ಪೋಲೀಸ್ ಠಾಣೆ.
12) ಶ್ರೀ ಚನ್ನಪ್ಪ, ಪ್ರಗತಿಪುರ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು
13) ಶ್ರೀ ಮೆಹತಾಬ್ ಫಯಾಝ್, ವಿವೇಕಾನಂದ ಕಾಲೋನಿ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು.
14) ಶ್ರೀ ಪ್ಯಾರು, ಸರಬಂಡೆಪಾಳ್ಯ ನಿವಾಸಿ ಹಾಗೂ ವಾರ್ಡ್ ಸಮಿತಿ ಸದಸ್ಯರು

ವಾರ್ಡ್ ಸಮಿತಿ ಸಂಚಾಲಕರು ಮತ್ತು ಕಿರಿಯ ಅಭಿಯಂತರರು ಬನಶಂಕರಿ ದೇವಸ್ಥಾನ ವಾರ್ಡ್ ಸಂಖ್ಯೆ-180 ರವರಾದ ಶ್ರೀ ಅವೀಶ ಹೆಚ್.ಎಂ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.**

ವಾರ್ಡ್‌ನ ನೋಡೆಲ್ ಅಧಿಕಾರಿಯವರು ಮೇಲಿನ ಅಧಿಕಾರಿಗಳ ಪರಿಚಯಿಸಲಾಯಿತು ಹಾಗೂ ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ ಪ್ರಥಮ ಸಭೆಯನ್ನು ಆಯೋಜಿಸಲಾಗಿದ್ದು, ಪ್ರಮುಖವಾಗಿ ಕೋವಿಡ್-19 ರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮೊದಲನೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ನೋಡೆಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

Scanned with CamScanner

1) ನೋಡಲ್ ಅಧಿಕಾರಿಗಳು ಮಾತನಾಡಿ 45 ವರ್ಷ ಮತ್ತು ಮೇಲ್ಪಟ್ಟವರಿಗೆ ಕೋವಿಡ್ ವ್ಯಾಕ್ಸಿನೇಷನ್ ಲಸಿಕೆಯನ್ನು ನೀಡಲು ಪ್ರಾರಂಭಿಸಿದ್ದು, ಸಾರ್ವಜನಿಕರಿಗೆ ಇದರ ಬಗ್ಗೆ ಅರಿವು ಮೂಡಿಸಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರುಗಳಿಗೆ ತಿಳಿಸಿದರು.

2) ನೋಡಲ್ ಅಧಿಕಾರಿಗಳು ಮಾತನಾಡಿ ಫೈಪ್‌ಲೈನ್ ರಸ್ತೆಯಲ್ಲಿನ ಕಸದ ಪಾಯಿಂಟ್‌ನಲ್ಲಿರುವ ಡೆಬ್ರಿಸ್ ಅನ್ನು ತೆರವುಗೊಳಿಸಲು ವಾರ್ಡಿನ ಅಭಿಯಂತರರಿಗೆ ತಿಳಿಸಿದರು.

3) ನೋಡಲ್ ಅಧಿಕಾರಿಗಳು ಮಾತನಾಡಿ ಪ್ರಗತಿಪುರ 8ನೇ ಅಡ್ಡರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ತುರ್ತಾಗಿ ಪೂರ್ಣಗೊಳಿಸಲು ವಾರ್ಡಿ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. ವಾರ್ಡಿನ ಅಭಿಯಂತರರು ಮಾತನಾಡಿ ಸದರಿ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ. ಸದರಿ ಜಾಗದಲ್ಲಿ ಮಣ್ಣು Settlement ಆದ ನಂತರ ಒಂದು ವಾರದೊಳಗೆ ಕಾಮಗಾರಿಯನ್ನು ಪ್ರಾರಂಭಿಸವುದಾಗಿ ತಿಳಿಸಿದರು.

4) ನೋಡಲ್ ಅಧಿಕಾರಿಗಳು ಮಾತನಾಡಿ ಕದಿರೇನಹಳ್ಳಿ ಅಂಡರ್ ಪಾಸ್ ಹತ್ತಿರ ಇರುವ ಕಸವನ್ನು ತೆರವುಗೊಳಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

5) ನೋಡಲ್ ಅಧಿಕಾರಿಗಳು ಮಾತನಾಡಿ ಪ್ರಗತಿಪುರ ಕೊನೆಯ ಭಾಗದಲ್ಲಿರುವ ಮಳೆ ನೀರು ಚರಂಡಿ ಬ್ಲಾಕ್ ಆಗಿದ್ದು, ಮಳೆಗಾಲ ಹತ್ತಿರ ಬರುತ್ತಿರುವ ಕಾರಣ ಮುಂಜಾಗ್ರತ ಕ್ರಮವಾಗಿ Desilting ಮಾಡಿಸಲು ಕಾರ್ಯಪಾಲಕ ಅಭಿಯಂತರರು (ಬೃಹತ್ ನೀರುಗಾಲುವೆ) ರವರಿಗೆ ತಿಳಿಸಿದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಗೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಅವರನ್ನು ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ಹಾಗೂ ಕಿರಿಯ ಅಭಿಯಂತರರು

-ಸಹಿ-
ವಾರ್ಡ್ 180 ರ ನೋಡಲ್ ಅಧಿಕಾರಿ
ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬಸವನಗುಡಿ ಉಪವಿಭಾಗ

Scanned with CamScanner